ಶ್ರೀ ಕೆ.ಎಸ್. ಈಶ್ವರಪ್ಪ :– 65 ಟಿಎಂಸಿ ಗೆ ನಾವು ಕೆಲಸವನ್ನು ಮಾಡಿಕೊಟ್ಟಿದ್ದೇವೆ. ಅವರು 16.65 ಕ್ಕೆ ಹಂಚಿಕೆಯನ್ನು ಮಾಡಿಕೊಟ್ಟಿದ್ದಾರೆ. ಫೈನಲ್ ಅಲ್ಲ, ಅದಕ್ಕಾಗಿ ನಾನು ಹೇಳುತ್ತಿರುವುದು.

ಶ್ರೀ ಕೆ.ಎಸ್. ಈಶ್ವರಪ್ಪ :– ನಾನು ಪ್ರಾರಂಭ ಮಾಡಿದ್ದೇ ಅಲ್ಲಿ. ನೀವು ಅದನ್ನು ಕೇಳಿಸಿಕೊಂಡಿರೋ ಗೊತ್ತಿಲ್ಲ. ಅವರು ಹೇಳಿರುವುದು 11.65, ನಾವು ಕೇಳಿರುವುದು 65 ಎಲ್ಲಿಂದ ಎಲ್ಲಿಗೆ, ಇದಕ್ಕೆ ಸಂಬಂಧವೇ ಇಲ್ಲ. ರಾಜ್ಯದ ದುಡ್ಡನ್ನು ತೆಗೆದುಕೊಂಡು ಹೋಗಿ ಸಿಕ್ಕಾಪಟ್ಟೆಯಾಗಿ ಖರ್ಚು ಮಾಡಿ ಅಷ್ಟು ನೀರು ಬರಲಿಲ್ಲವೆಂದರೆ ರಾಜ್ಯದ ದುಡ್ಡು ನಷ್ಟವಾಗುತ್ತದೆಯೇ ವಿನಃ ಪೂರ್ಣಾವಧಿ ನೀರು ಬರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಈ ಕಾಮಗಾರಿಯನ್ನು ಯಾವುದೇ ಕಾರಣಕ್ಕೂ ತಕ್ಷಣ ಶುರು ಮಾಡುತ್ತೇವೆ. ಇದರಲ್ಲಿ ಹಿಂದೆ ಮುಂದೆ ನೋಡುವ ಪ್ರಶ್ನೆ ಇಲ್ಲ.

ಭೀಮಾ ನದಿಯಿಂದ ನೀರು ಪೂರೈಕೆ

287 (1317) ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ) :– ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಫಜಲಪುರ ಮತಕ್ಷೇತ್ರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೊಳವೆ ಬಾವಿಗಳನ್ನು ತೋಡಿದರೂ ನೀರು ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರೈತರ ಬಾವಿಗಳಲ್ಲಿಯೂ ಕೂಡ ನೀರು ಇಂಗಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ತಾಲ್ಲೂಕಿನಲ್ಲಿ ಹರಿಯುವ ಭೀಮಾ ನದಿಯಿಂದ ಕೆರೆಗಳಿಗೆ ನೀರು ತುಂಬುವ ಯೋಜನೆ ಕಾರ್ಯಗತವಾದರೆ ಕುಡಿಯುವ ನೀರಿನ ಸಮಸ್ಯೆ ಮತ್ತು ರೈತರ ಬಾವಿಗಳಿಗೆ ನೀರಾವರಿ ಸೌಲಭ್ಯ ದೊರಕಬಹುದೆಂದು ಸರ್ಕಾರ ಯೋಚಿಸಿದೆಯೇ;

ಉ) ಹಾಗಿದ್ದಲ್ಲಿ ಈ ಕಾರ್ಯಕ್ರಮವನ್ನು ಸರ್ಕಾರ ಯಾವಾಗ ಅನುಷ್ಠಾನಕ್ಕೆ ತರಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಬಂದಿದೆ.

ಆ) ಬಂದಿದೆ.

ಇ) ಬಂದಿದೆ.

ಈ) ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಾಧುತ್ವ ನೋಡಿ ಭೀಮಾನದಿ ನೀರನ್ನು ಕೆರೆಗಳಿಗೆ ತುಂಬಿಸುವ ಕುರಿತು ಜಲಸಂಪನ್ಮೂಲ ಇಲಾಖೆ ಪರಿಶೀಲಿಸುತ್ತದೆ. ಸದ್ಯಕ್ಕೆ ಭೀಮಾನದಿ ಎಡದಂಡೆ ಬದಿಯ ತಾಂಡಗಳ ಬಳಿಯಿಂದ ನೀರು ಪಡೆದು ಅಫಜಲಪುರದ ತಾಲ್ಲೂಕಿನ ಗೊಬ್ಬೂರು(ಬಿ) ಮತ್ತಿತರ ಗ್ರಾಮಗಳು, ರೇವೂರ್ (ಬಿ), ಮಾಶಾಳ್ ಹಾಗೂ ಇತರೆ ಗ್ರಾಮಗಳ ಮತ್ತು ಮಲ್ಲಾಬಾದ್ ಹಾಗೂ ಇತರೆ ಗ್ರಾಮಗಳ ರೂ. 8.06 ಕೋಟಿ ಅಂದಾಜಿನ 4– ಪ್ರತ್ಯೇಕ ಕುಡಿಯುವ ನೀರಿನ ಯೋಜನೆಗಳ ರೇಖಾ ಅಂದಾಜನ್ನು ಸಿದ್ಧಪಡಿಸಲಾಗಿದೆ.

ಉ) ಈ ಯೋಜನೆಗಳ ವಿವರಣಾತ್ಮಕ ಅಂದಾಜು ಪಟ್ಟಿ ತಯಾರಿಕೆ ಇತ್ಯಾದಿಗಳು ಪ್ರಾಥಮಿಕ ಹಂತದಲ್ಲಿದ್ದು, ಸಬ್–ಮಿಷನ್ ಕಾರ್ಯಕ್ರಮದಡಿ 2007–08 ರ ಸಾಲಿನಲ್ಲಿ ಪ್ರಸ್ತಾಪಿಸಲು ಉದ್ದೇಶಿಸಿದೆ.

ಶ್ರೀ ಎಂ. ವೈ. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರವು ಸಮರ್ಪಕವಾಗಿಲ್ಲವೆಂದು ನನಗನಿಸುತ್ತದೆ. " ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿಯನ್ನು ತೋಡುವಂತಹ ಕೆಲಸವಾಗಿದೆ" ಎಂದು ನನಗನ್ನಿಸುತ್ತದೆ. ಅಫಜಲ್‌ಪುರ ಕ್ಷೇತ್ರದಲ್ಲಿ ಈಗಾಗಲೇ ಪೂರ್ತಿಗೊಂಡ ಜಲನಿರ್ಮಲ ಯೋಜನೆಗಳು, ಈಗ ಜಲ ಮೂಲವು ಬತ್ತಿ ಹೋಗುವುದರಿಂದ ಎಲ್ಲಾ ಯೋಜನೆಗಳು ಸ್ಥಗಿತವಾಗಿ defunct ಆಗಿದೆ. ನಾನು ಅವರಿಗೆ ಸಲಹೆಯನ್ನು ಸೂಚಿಸಿದ್ದೆ. 100 ಕಿಮಿ ಭೀಮಾನದಿ

ನನ್ನ ಕ್ಷೇತ್ರದ ಭಾಗದಲ್ಲಿ ಹರಿಯುತ್ತದೆ. ಆದ್ದರಿಂದ ಅನೇಕ ಕೆರೆಗಳು ಖಾಲಿ ಇವೆ. ಅಲ್ಲಿ ನೀರು ತುಂಬಿರುವುದಿಲ್ಲ. ಆ ಭೀಮಾನದಿಯಿಂದ ನೀರು ತುಂಬಿದರೆ ಈ ಎಲ್ಲಾ ಕುಡಿಯುವ ನೀರಗೆ ಅನುಕೂಲವಾಗುತ್ತದೆಂದು ನಾನು ಅವರಿಗೆ ಕೇಳಿದ್ದೆ. ಆದರೆ ಅವರು ನೀಲಿ ನಕ್ಷೆಯನ್ನು ಮಾಡಿದ್ದೇವೆ. ಲೈನ್ ಎಸ್ಟಿಮೇಟ್ ಮಾಡಿದ್ದೇವೆಂದು ಹೇಳುತ್ತಾರೆ. ಅದಕ್ಕೆ ಬಹಳ ತೀವ್ರ ಸಮಸ್ಯೆ ಇದೆ. ಅದಕ್ಕೆ ಪರಿಹಾರ ಕಾಣಬೇಕಾದರೆ ಭೀಮಾನದಿಯಿಂದ ಕೆರೆಗಳಿಗೆ ನೀರು ತುಂಬಿದರೆ ಜಲ ಮೂಲವಾಗಿ ಎಲ್ಲಾ ಬಾವಿಗಳಿಗೆ ನೀರು ಸಿಗುತ್ತದೆಂದು ಸಲಹೆಯನ್ನು ಕೊಟ್ಟಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಎಸ್. ಎ. ರವೀಂದ್ರನಾಥ್ : – ಈ ಯೋಜನೆಗಳಿಗೆ ಅಂದಾಜು ಪಟ್ಟಿಯನ್ನು ತಯಾರು ಮಾಡಿದ್ದೇವೆ. ಅದು 8.6 ಕೋಟಿ ರೂ.ಗಳು ಈಗ ಅದನ್ನು 2007–08 ರೊಳಗಡೆ ಏನೂ ರಾಜೀವ್ ಗಾಂಧಿ ಸಬ್ ಮಿಷನ್‌ದು ಒಂದು ಕಮಿಟಿ ಇದೆ. ಆ ಕಮಿಟಿಯಿಂದ ಮೀಟಿಂಗ್‌ನ್ನು ಕರೆದು ಪ್ರಪೋಸಲ್‌ನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ್ದು ಆ ತಾಲ್ಲೂಕಿನದು 162.37 ಲಕ್ಷ ಹಣವನ್ನು ಕೊಟ್ಟಿದ್ದರೆ ಇಲ್ಲಿಯವರೆಗೆ ಅವರು 70 ಲಕ್ಷ ರೂಗಳನ್ನು ಖರ್ಚು ಮಾಡಿರುತ್ತಾರೆ. ಆ ರೀತಿಯಾಗಿ ಅಲ್ಲಿ ಹಣದ ಗೊಂದಲವಿಲ್ಲ. ಅವರಿಂದ ಏನು ಕೆಲಸವನ್ನು ಬೇಕಾದರೂ ಮಾಡಿಸಿಕೊಳ್ಳಬಹುದು. ಆದರೆ ಭೀಮಾ ನದಿಯಿಂದಲೇ ನೀರು ಬೇಕು ಎಂದು ಹೇಳುವುದರಿಂದ ಅದು ಮುಂದಿನ ಲೇಖಾನುದಾನದಲ್ಲಿ ತೆಗೆದುಕೊಂಡು ಕೆಲಸವನ್ನು ಮಾಡಿಸಿಕೊಡುತ್ತೇವೆ.

ಶ್ರೀ ಎಂ.ವೈ. ಪಾಟೀಲ್ :– ಈಗಾಗಲೇ ಬಹಳಷ್ಟು ಯೋಜನೆಗಳು ಜಲ ನಿರ್ಮಲದಲ್ಲಿ ಪೂರ್ತಿಗೊಂಡರೂ ಕೂಡ ಅವೆಲ್ಲವೂ ಕೂಡ ಬತ್ತಿ ಹೋಗಿವೆ. ಆ ಕೊಳವೆ ಬಾವಿಗಳು ಬತ್ತಿ ಹೋಗಿವೆ. ಆ ಯೋಜನೆಗಳು ಸ್ಥಗಿತಗೊಂಡಿವೆ, de-funct ಆಗಿವೆ. ಅದರ ಬಗ್ಗೆ ತಾವು ಏನು ಹೇಳುತ್ತೀರಿ? ಹೇಳಿ.

ಶ್ರೀ ಎಸ್. ಎ. ರವೀಂದ್ರನಾಥ್ :– ಮಳೆಯು ಕಡಿಮೆಯಾಗಿರುವುದರಿಂದ ಬರಗಾಲ ಹೆಚ್ಚಿಗೆ ಇರುವುದರಿಂದ ಇರತಕ್ಕಂತಹ ವ್ಯವಸ್ಥೆಗಳು ಎಲ್ಲಾ ಕಡೆಗಳಲ್ಲಿ

ಹಾಳಾಗಿದೆ. ಈಗ ಏನೇನು defunct ಆಗಿದೆ, ಅದನ್ನು ಮಾಡಬೇಕಾದರೆ ಏನು ಕೆಲಸವನ್ನು ಮಾಡಬಹುದು, ಅವೆಲ್ಲವನ್ನು ಮಾಡಿದ್ದೇವೆ. ಆದರೂ ಸಹ ನಮಗೆ ನೀರು ಸಿಗುತ್ತಿಲ್ಲ. ಈಗ ಅನಿವಾರ್ಯವಾಗಿ ಈ ಯೋಜನೆಗಳು ಬೇಕಾಗುತ್ತದೆ.

ಶ್ರೀ ಹೆಚ್. ನಿಂಗಪ್ಪ :– ಕುಡಿಯುವ ನೀರಿನ ಸಮಸ್ಯೆ ಇತ್ತು ಎಲ್ಲಾ ಕಡೆ ಆಗಿದೆ. ಅದಕ್ಕೆ ಇವರು ಭೀಮಾನದಿಯಿಂದ ಏನು ನೀರನ್ನು ಕೆರೆಗಳಿಗೆ ಹರಿಸಿಕೊಳ್ಳಬೇಕೆಂದು ಇದ್ದಾರೆ. ಇವತ್ತು ಅದೇ ರೀತಿಯಾಗಿ ನಮ್ಮ ಕ್ಷೇತ್ರದಲ್ಲಿಯೂ ಕೂಡ ಹೆಬ್ಬೂರು, ಗೂಳೂರು ಹೋಬಳಿಗೆ ಹೇಮಾವತಿಯ ನೀರನ್ನು ಕೆರೆಗಳಿಗೆ ತುಂಬಿಸಿಕೊಂಡು ನೀರನ್ನು 52 ಹಳ್ಳಿಗಳಿಗೆ ಕೊಡುವಂತಹ ಒಂದು ಯೋಜನೆಯಾಗಿದೆ. ಅದೇ ರೀತಿಯಾಗಿ ನಮ್ಮ ಪಕ್ಕದ ತಿಪಟೂರು ತಾಲ್ಲೂಕಿನಲ್ಲಿ ಒಂದು ಹೊನ್ನವಳ್ಳಿ ಯೋಜನೆ, ಇಂತಹ ಯೋಜನೆಗಳಿಂದ ಕೆರೆಗಳಿಗೆ ನೀರನ್ನು ತುಂಬಿಸಿಕೊಂಡು ಕೆರೆಗಳಿಂದ ಇವತ್ತು ನೀರನ್ನು ಕೊಡುವಂತಹ ಕೆಲಸವನ್ನು ಮಾಡಿದರೆ ಇವತ್ತು ಕೆರೆಗಳಲ್ಲಿ ನೀರು ತುಂಬುವುದರಿಂದ ಅಂತರಜಲದ ಮಟ್ಟವೂ ಕೂಡ ಹೆಚ್ಚುತ್ತದೆ. ಕೊಳವೆ ಬಾವಿಗಳಲ್ಲಿ ನೀರು ಕೂಡ ಸಿಗುತ್ತದೆ. ಇವತ್ತು ಮಳೆ ಕಡಿಮೆಯಾಗಿರುವುದರಿಂದ ಅಂತರಜಲದ ಮಟ್ಟ ಕುಸಿದು. . .

ಉಪಾಧ್ಯಕ್ಷರು :– ಮಾನ್ಯ ನಿಂಗಪ್ಪನವರೆ, ತಾವು ಹೇಳುತ್ತಿರುವುದು ಬಹಳವಾಯಿತು. ಒಂದು ಅಥವಾ ಎರಡು ಮಾತಿನಲ್ಲಿ ತಾವು ಹೇಳಿ ಮುಗಿಸಬೇಕು.

ಶ್ರೀ ಹೆಚ್. ನಿಂಗಪ್ಪ :– ನಾನು ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿ ಎಂದು ನೀರಾವರಿ ಸಚಿವರಲ್ಲಿ ಕೇಳುತ್ತಿದ್ದೇನೆ.

ಉಪಾಧ್ಯಕ್ಷರು :– ನೀರಾವರಿ ಸಚಿವರದು ಪ್ರಶ್ನೆ ಆಯಿತಲ್ಲಾ.

ಶ್ರೀ ಎ.ಎಸ್. ಬಸವರಾಜು :– ಅರಸೀಕೆರೆಗೂ ಕೂಡ ಫ್ಲೋರೈಡ್ ಅಂಶ ಇರುವುದರಿಂದ ಇದೇ ಒಂದು ಕಾನೂನಿನ ಅಂಶವನ್ನು ತರಬೇಕೆಂದು ನಾನು ಕೂಡ ಒತ್ತಾಯವನ್ನು ಮಾಡುತ್ತೇನೆ

ಉಪಾಧ್ಯಕ್ಷರು :– ಇದು ನೀರಾವರಿ ಸಚಿವರ ಪ್ರಶ್ನೆ ಅಲ್ಲ ಮಾನ್ಯ ನಿಂಗಪ್ಪನವರೆ.

ಶ್ರೀ ಹೆಚ್. ನಿಂಗಪ್ಪ :– ಇದು ಬಹಳ ಮುಖ್ಯವಾದ ಪ್ರಶ್ನೆ, ಮಾನ್ಯ ಸಚಿವರು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಆಶ್ವಾಸನೆಯನ್ನು ಕೊಟ್ಟು ಬಂದಿದ್ದಾರೆ. ಅದೇ ರೀತಿಯಾಗಿ ಹೆಬ್ಬೂರು ಮತ್ತು ಗೂಳೂರು ಏತ ನೀರಾವರಿ ಯೋಜನೆಯು ಕೂಡ ಕುಡಿಯುವ ನೀರಿನ ಯೋಜನೆಯಾಗಿರುವದರಿಂದ ಜೊತೆಗೆ ಕಾವೇರಿ ಟ್ರಿಬ್ಯೂನಲ್ ಅಂತಿಮ ತೀರ್ಪು ಹೊರಬಿದ್ದುದರಿಂದ ದಯಮಾಡಿ ಇದನ್ನು ಕಾರ್ಯಾರಂಭ ಮಾಡಲಿ ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಸದಸ್ಯರುಗಳಾದ ನಿಂಗಪ್ಪ ಹಾಗೂ ಬಸವರಾಜುರವರ ಕಳಕಳಿಯೂ ಕೂಡ ಆ ಭಾಗದಲ್ಲಿ ನಾನು ಹೋದಾಗ ಸ್ಪಷ್ಟವಾಗಿದೆ. ಆ ಭಾಗದ ರೈತರ ಭಾವನೆಗಳಿಗೆ ಅವರು ಸ್ಪಂದಿಸುತ್ತಿದ್ದಾರೆ. ನಾನು ಅಲ್ಲಿಗೆ ಹೋಗಿ ನೋಡಿದ್ದೇನೆ. ಈಗಾಗಲೇ ನಾನು ಹೋಗಿ ನೋಡಿಕೊಂಡು ಬಂದಿರುವ ಪ್ರಕಾರ ತೀರ್ಪು ಬಂದು ಹೋಗಿರುವುದರಿಂದ ಆ ಎರಡು ಕಾಮಗಾರಿಗಳ ಬಗ್ಗೆ ಅವರು ಏನು ಅಪೇಕ್ಷೆಯನ್ನು ಪಟ್ಟಿದ್ದಾರೆ, ಇದನ್ನು ಮಾಡುವುದರ ಬಗ್ಗೆ ಸರ್ಕಾರವು ಯೋಚನೆಯನ್ನು ಮಾಡುತ್ತಿದೆ. ಆದಷ್ಟು ಬೇಗ ಆ ಬಗ್ಗೆ ಗಮನವನ್ನು ಕೊಟ್ಟು ಶುರು ಕೂಡ ಮಾಡುತ್ತೇವೆ.

ಶ್ರೀ ಎಸ್. ಎ. ರವೀಂದ್ರನಾಥ್ :– ಅನುಮೋದನೆಯನ್ನು ತೆಗೆದುಕೊಂಡು ಮಾಡಿಸುವಂತಹ ಕೆಲಸವನ್ನು ಮಾಡುತ್ತೇನೆ.

ಉಪಾಧ್ಯಕ್ಷರು :– ಮಾನ್ಯ ಪಾಟೀಲ್‌ರವರೆ, ಮಾನ್ಯ ಸಚಿವರು ಮಾಡಿಸಿಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎಂ. ವೈ. ಪಾಟೀಲ್ :– ಮಾನ್ಯ ಸಚಿವರು ಹೊಸ ಯೋಜನೆಗಳ ಬಗ್ಗೆ ಹೇಳುತ್ತಿದ್ದಾರೆ. ಈಗ ನಿಂತಿರುವಂತಹ ಯೋಜನೆಗಳ ಬಗ್ಗೆ ಹೇಳಬೇಕು. ಈಗ ಅಲ್ಲಿ ನೀರು ಇರುವುದಿಲ್ಲ. ನಮ್ಮಲ್ಲಿ ದೊಡ್ಡ ದೊಡ್ಡ ಹಳ್ಳಿಗಳು ಇದ್ದು 10 ಸಾವಿರ ಜನಸಂಖ್ಯೆ ಇದೆ. ಅಲ್ಲಿ ಟ್ಯಾಂಕರ್‌ಗಳಿಂದ ನೀರನ್ನು ಸಪ್ಲೈ ಮಾಡಿದರೂ ಕೂಡ ಸಾಧ್ಯವಿಲ್ಲ. ಅಲ್ಲಿ ನೀರು ಸಿಗುತ್ತಿಲ್ಲ. ಅಲ್ಲಿ ಟ್ಯಾಂಕರ್‌ಗಳಿಗೆ ತುಂಬುವುದಕ್ಕೂ ಕೂಡ ನೀರು ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನೀವು ಪಕ್ಕದಲ್ಲಿ ಹರಿಯುತ್ತಿರುವ

ಭೀಮಾನದಿಯ ನೀರನ್ನು ಉಪಯೋಗ ಏತಕ್ಕೆ ಪಡೆಯುತ್ತಿಲ್ಲವೆಂದು ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅಲ್ಲಿ ದೊಡ್ಡ ದೊಡ್ಡ ಹಳ್ಳಿಗಳಿಗೆ ನೀರು ಸರಬರಾಜು ಇಲ್ಲ.

ಶ್ರೀ ಎಸ್. ಎ. ರವೀಂದ್ರನಾಥ್ :– ಅಲ್ಲಿ ಎಲ್ಲಿ ನೀರು ಸಿಗುವುದಿಲ್ಲ. ನೀರು ಸಿಗದೆ ಇರುವಂತಹ ಕಡೆಗೆ ಟ್ಯಾಂಕರ್‌ನಿಂದ ನೀರು ಕೊಡುವಂತಹ ಪರ್ಯಾಯ ವ್ಯವಸ್ಥೆಯೇ ಹೊರತು ಅಲ್ಲಿ ಯಾವುದೇ ರೀತಿಯ ಬೋರ್‌ನ್ನು ರೀಬೋರ್ ಮಾಡಿದರೂ ಕೂಡ ಆಗುತ್ತಿಲ್ಲ. ಯಾವುದೇ ರೀತಿಯಿಂದಲೂ ಇಲ್ಲಿ ನೀರು ಇಲ್ಲದೆ ಇರುವುದರಿಂದ ಬೇರೆ ಅನಿವಾರ್ಯವಾಗಿರುವಂತಹ ಪರಿಸ್ಥಿತಿಯಾಗಿದೆ. ಆದ್ದರಿಂದ ಟ್ಯಾಂಕರ್‌ನಿಂದ ನೀರು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಉಪಾಧ್ಯಕ್ಷರು :– ಈಗ ಮಾನ್ಯ ಪಾಟೀಲರನ್ನು ನಿಮ್ಮ ಛೇಂಬರಿಗೆ ಕರೆಸಿಕೊಂಡು ಅವರಿಗೆ ಸ್ವಲ್ಪ ಕನ್‌ವಿನ್ಸ್ ಮಾಡಬೇಕು. ಮಾನ್ಯ ಪಾಟೀಲ್‌ರವರೆ, ನಾನು ನಿಮ್ಮ ಪರವಾಗಿ ಹೇಳಿದ್ದೇನೆ. ನೀವು ನಾಳೆ ಬೆಳಿಗ್ಗೆ ಅವರ ರೂಮಿಗೆ ಹೋಗಿ ಮಾತನಾಡಿ.

ಶ್ರೀ ಹೆಚ್. ನಿಂಗಪ್ಪ :– 10 ಸಾವಿರ ಇರುವ ಜನಸಂಖ್ಯೆಗೆ ಟ್ಯಾಂಕರ್‌ನಿಂದ ನೀರನ್ನು ಹೇಗೆ ಸಪ್ಲೈ ಮಾಡುವುದಕ್ಕಾಗುತ್ತದೆ?

ಉಪಾಧ್ಯಕ್ಷರು :– ಮಾನ್ಯ ಸಚಿವರು ಅವರನ್ನು ನಾಳೆ ಬೆಳಿಗ್ಗೆ ಕರೆಸಿಕೊಂಡು ಮಾತನಾಡಿ.

ಸುವರ್ಣ ಗ್ರಾಮೋದಯದಡಿ ಹಳ್ಳಿಗಳನ್ನು ಆಯ್ಕೆ ಮಾಡುವುದು

2223 ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಗುಳೇದಗುಡ್ಡ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳನ್ನು ಸೇರಿಸಲಾಗಿದೆ (ಆಯ್ಕೆಯಾದ ಗ್ರಾಮಗಳ ವಿವರ ಒದಗಿಸುವುದು);